## ಪ್ರಧಾನ ಸಿವಿಲ್ ನ್ಯಾಯಾಧೀಶರು ಜೆಎಂಎಫ್‌ಸಿ ನ್ಯಾಯಾಲಯ, ಚನ್ನಪಟ್ಟಣ

## CC No : 834/2014

CW. 7 PW. 4

**ಹೆಸರು** ः ಡಾ. ಸುಮಾ
ತಂದೆ/ಗಂಡ ः ಸೋಮಶೇಖರ್
ವಯಸ್ಸು ः 47 ವರ್ಷ
ಉದ್ಯೋಗ ः ಹಿರಿಯ ತಜ್ಞ ವೈದ್ಯರು, ವಾಣಿವಿಲಾಸ ಆಸ್ಪತ್ರೆ
ವಾಸ ः ಬೆಂಗಳೂರು

ಸ್ಸಾಕ್ಷಿಯನ್ನುಕರೆಯಿಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.
ಮುಖ್ಯ ವಿಚಾರಣೆ ಎ.ಪಿ.ಪಿ ಯವರಿಂದः ದಿः11.07.2023

ನಾನು 2012 ಜೂನ್ ರಿಂದ 2015 ಜೂನ್ ವರೆಗೆ ಚನ್ನಪಟ್ಟಣ ಸರ್ಕಾರಿ ಆಸತ್ರೆಯಲ್ಲಿ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿः23.03.2014 ರಂದು ನಾನು ಕರ್ತವ್ಯದಲ್ಲಿದ್ದಾಗ ಮಧ್ಯರಾತ್ರಿ 2 ಗಂಟೆ ಸಮಯದಲ್ಲಿ ಚಾಸಾ-1 ರವರು ಹಲ್ಲೆಯಾದ ಹಿನ್ನೆಲೆಯಲ್ಲಿ ಆಸ್ಪತ್ರೆಗೆ ಬಂದಿದ್ದರು, ಅವರನ್ನು ಪರೀಕ್ಷಿಸಲಾಗಿ ಕೆಳಕಂಡ ಗಾಯಗಳು ಕಂಡುಬಂದಿರುತ್ತದೆः-

1. ಬಲಗೈ ಹೊರಭಾಗದಲ್ಲಿ 6*1 ಸೆಂ.ಮೀ ಅಳತೆಯ ಹರಿದ ಗಾಯವು ಕಂಡು ಬಂದಿರುತ್ತದೆ.

2. ಬಲ ಮೊಣಕೈ ನಲ್ಲಿ ಊತದ ಗಾಯ ಕಂಡು ಬಂದಿರುತ್ತದೆ.

ನನ್ನ ಅಭಿಪ್ರಾಯದಲ್ಲಿ ಈ ಮೇಲ್ಕಂಡ ಗಾಯಗಳು ಸಾಧಾರಣ ಸ್ವರೂಪದ ಗಾಯಗಳು ಆಗಿರುತ್ತವೆ. ನಾನು ಈ ಬಗ್ಗೆ ಗಾಯದ ಪ್ರಮಾಣ ಪತ್ರವನ್ನು ನೀಡಿದ್ದು ಅದನ್ನು ನಿಪಿ.12 ಎಂದು ಸಾಕ್ಷಿಯ ಸಹಿಯನ್ನು ನಿಪಿ 12(ಎ) ಎಂದು ಗುರುತಿಸಲಾಯಿತು.

ನ್ಯಾಯಾಲಯದ ಮುಂದೆ ಇರುವ ಲಾಂಗ್ ನಿಂದ ಹಲ್ಲೆ

ಮಾಡಿದರೆ ಈ ಮೇಲೆ ಹೇಳಿದ ಗಾಯಗಳು ಆಗುವ ಸಾಧ್ಯತೆ ಇರುತ್ತದೆ.

**ಪಾಟೀ ಸವಾಲುಃ ಆರೋಪಿ ಪರಃಹೆಚ್.ಎಸ್.ಹೆಚ್. ವಕೀಲರಿಂದಃ-**

ನನ್ನ ಮುಂದೆ ಯಾವುದೇ ಆಯುಧವನ್ನು ಹಾಜರುಪಡಿಸಿ ನನ್ನ ಅಭಿಪ್ರಾಯ ಪಡೆದಿರುವುದಿಲ್ಲ. ಕ್ಯಾಂಟರ್ ವಾಹನದ ಬಾಗಿಲಿನಲ್ಲಿ ಚೂಪಾದ ಚಕ್ಕೆ ಎದ್ದಿದ್ದು ಬಾಗಿಲು ತೆರೆಯುವಾಗ ಅದು ತಲುಲಿ ಈ ಮೇಲೆ ಹೇಳಿದ ಗಾಯಗಳು ಆಗುವ ಸಾಧ್ಯತೆ ಇದೆ ಎಂದರೆ ಸರಿ.

ಮರು ವಿಚಾರಣೆ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಬೆರಳಚ್ಚು ಮಾಡಲಾಯಿತು)**

ಓ.ಹೇ.ಕೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಚನ್ನಪಟ್ಟಣ.